**ತಮ್ಮ ಕ್ಷೇಮ ಇದೆಂದು ತಿಳಿವರೀ ಜನರು ॥**
**ನೀನು ಚಾಲಕಶಕ್ತಿ ನಾನೊಂದು ಯಂತ್ರ**
**ನಾನೊಂದು ಬರಿಯ ಮನೆ ನೀನದರ ರಥಿಕ**
**ನೀ ನಡೆಸೆ ನಾ ನಡೆವೆ ನಿನ್ನದೀ ಲೋಕ॥**

ಶ್ರೀ ವಿಜಯದಾಸರು ತಮ್ಮ ಈ ಸುಳಾದಿಯಲ್ಲಿ ಆತ್ಮನಿಕ್ಷೇಪದ ಪೂರ್ಣ ವಿವರಣೆ ಕೊಡುತ್ತಾರೆ.

**ಹರಿಯೇ ನಿನ್ನಾಧೀನ ಜ್ಞಾನೇಂದ್ರಿಯಗಳು**
**ಹರಿಯೇ ನಿನ್ನಾಧೀನ ಕರ್ಮೇಂದ್ರಿಯಗಳು**
**ಹರಿಯೇ ನಿನ್ನಾಧೀನ ಪಂಚಭೂತಾತ್ಮಗಳು**
**ಹರಿಯೇ ನಿನ್ನಾಧೀನ ಮನಚಿತ್ತಾದಿಗಳು**
**ಹರಿಯೇ ನಿನ್ನಾಧೀನ ಸಕಲ ಚೇತನವು**
**ಹರಿಯೇ ನಿನ್ನಾಧೀನ ಸಕಲ ಚೇಷ್ಟೆಗಳು**
**ಹರಿಯೇ ನೀ ನೇಮಿಸಿದ ಕಾರಣ ಎನ್ನ ಶ-**
**ರೀರದೊಳಗೆ ಭರಿತವಾಗಿದೆ ಹೊರಗಿದ್ದ**
**ಸರಕು ಬೆಲೆ ಮಾಡಿದಂತೆ ಈ**
**ಸರಕು ಧನವನಿತ್ತು ತುಂಬಲಿಲ್ಲ ಎನ್ನ**
**ಮರೆತು ಬಿಡುವುದಲ್ಲ ಬಿರುದುಳ್ಳದೈವವೇ**
**ಕುಣಿಸಿದರೆ ಕುಣಿವೆ ನಗಿಸಿದರೆ ನಗುವೆ**
**ಮಣಿಸಿದರೆ ಮಣಿವೆ ಅಳಿಸಿದರೆ ಅಳುವೆ**
**ಉಣಿಸಿದರೆ ಉಣುವೆ ಉಡಿಸಿದರೆ ಉಡುವೆ**
**ಮನುಜವೇಷನೆ ಸಿರಿ ವಿಜಯವಿಠಲ ನೀನೆ**
**ದಣಿಸಿದರೆ ದಣಿವೆ ನೆನವಿತ್ತರೆ ನೆನೆವೆ**

ಹೀಗೆ ಭಗವಂತನನ್ನು ಸ್ಮರಿಸುವ ಶಕ್ತಿಯನ್ನೂ ಅವನೇ ಕೊಡಬೇಕು. ಏಕೆಂದರೆ ಜೀವನ ಜನನ ಮರಣ ಪಾರಣ ಕ್ಷಣಕ್ಷಣದ ಶ್ವಾಸ, ಚಿಂತನೆಗಳು ಎಲ್ಲವೂ ಆ ದೇವದೇವನ ಅಧೀನ, ಅವನೇ ಅನುಗ್ರಹಿಸಬೇಕು ಎನ್ನುತ್ತಾರೆ ದಾಸವರೇಣ್ಯರು.

ಸಮರ್ಪಣ ಭಾವವೆಂದರೆ ಯಾವುದೇ ವಸ್ತುವಿನಲ್ಲಿ ತನ್ನ ಸ್ವಾಮಿತ್ವವನ್ನು ಆರೋಪಿಸದೆ ಎಲ್ಲವೂ ಪರಮಾತ್ಮನಿಗೇ ಸೇರಿದುದು ಎಂದು ತಿಳಿಯುವುದು. ಶ್ರೀ ಜಗನ್ನಾಥದಾಸರು ತಮ್ಮ *ಹರಿಕಥಾಮೃತಸಾರ* ದಲ್ಲಿ ''ಅನಲ ಪಕ್ವಗೊಳಿಸಿದ ಅನ್ನವ ಅನಲದಲಿ ಹೋಮಿಸುವ ತೆರದಲಿ'' ಎನ್ನುತ್ತಾರೆ. ಎಂದರೆ ಹೋಮಾಗ್ನಿಗೆ ಅರ್ಪಿಸಬೇಕಾದ ಹವಿಸ್ಸನ್ನು ಬೇಯಿಸಲು ಅಗ್ನಿಯೇ ಬೇಕು. ಇದರಂತೆಯೇ ಪರಮಾತ್ಮ ತನ್ನದನ್ನು ತಾನೇ ಸ್ವೀಕರಿಸಿ ಸಂತೋಷಪಡುತ್ತಾನೆ. ಎಲ್ಲವೂ ಅವನಿಗೇ ಸೇರಿದುದು, ನಮ್ಮದೆಂಬ ವಸ್ತು ಯಾವುದಿದೆ? ಶ್ರೀಪಾದರಾಜರು,

**ಪಾಲೊಳಗದ್ದು ನೀರೊಳಗದ್ದು**
**ಹರಿ ನಿನ್ನ ನಂಬಿದೆನೋ**
**ಜಲಜನಾಭ ನೀನಿಟ್ಟ ತೆರದಲಿ ಇರುವೆನಯ್ಯಾ**

ಎಂದು ಹಾಡುತ್ತಾ 'ನಿನ್ನಯ ಮತವೇ ನನಗೆ ಸನ್ಮತವಯ್ಯಾ' ಎಂದು ಶ್ರೀಹರಿಯನ್ನು ಭಕ್ತಿಯಿಂದ ಕೊಂಡಾಡುತ್ತಾರೆ.

ನಮ್ಮ ಜೀವನ ನಿರ್ವಹಣೆಗೆ ಬೇಕಾದುದೆಲ್ಲವನ್ನೂ ಪರಮಾತ್ಮನೇ ಕಾಲಕಾಲಕ್ಕೆ ಕೊಡುತ್ತಾನೆ. ಹುಟ್ಟಿಸಿದ ಸ್ವಾಮಿ ಹುಲ್ಲು ಮೇಯಿಸುವುದಿಲ್ಲವಲ್ಲವೆ? ಇಂತಹ ಆತ್ಮನಿಕ್ಷೇಪ ಭಾವವುಳ್ಳ ಭಕ್ತನು ತಾನು ಮಾಡುವ ಎಲ್ಲ ಕ್ರಿಯೆಯೂ ಅವನ ಪೂಜೆ, ಅವನ್ನೂ ಅವನೇ ಕರುಣೆಯಿಂದ ಮಾಡಿಸಿಕೊಳ್ಳುತ್ತಾನೆ. ಅವನು ಸರ್ವರಕ್ಷಕ ಎಂಬ ಭಾವದಿಂದ ತುಂಬಿರುತ್ತಾನೆ. ಸಂತೆಯಲ್ಲಿ ಚಿಕ್ಕ ಮಗುವಿನ ಕೈಯನ್ನು ತಂದೆ ಗಟ್ಟಿಯಾಗಿ ಹಿಡಿದುಕೊಂಡಿದ್ದಾಗ, ಆ ಕಂದನು ಯಾವ ಭೀತಿಯೂ ಇಲ್ಲದೆ ಹೇಗೆ ರಾಜಾರೋಷವಾಗಿ ನಡೆಯುತ್ತಿರುತ್ತಾನೆಯೋ ಅದರಂತೆ ಶ್ರೀಹರಿಯು ತನ್ನನ್ನೇ ನಂಬಿರುವ ತನ್ನ ಕಂದಮ್ಮಗಳ ಕೈಗಳನ್ನು ಭದ್ರವಾಗಿ ಹಿಡಿದು, ಭೀತಿಯನ್ನು ನಿವಾರಿಸಿ, ಭವವೆಂಬ ಸಂತೆಯ ಆಕರ್ಷಣೆಗಳಿಂದ ಪಾರುಮಾಡಿ ಕಾಪಾಡುವನು.

ಹೀಗೆ ಶರಣಾಗತನಾದ ಭಕ್ತನು ಭಗವಂತನನ್ನು ಕುರಿತು, ''ನಾನು ನಿನಗೆ ಸೇರಿದವನು, ನನ್ನನ್ನು ಎಲ್ಲಾದರೂ ಇಡು. ಹೇಗಾದರೂ ಇಡು. ಆದರೆ ನೀನು ಮಾತ್ರ ನನ್ನನ್ನು ಎಂದಿಗೂ ಬಿಡದಿರು'' ಎಂದು ಪ್ರಾರ್ಥಿಸುತ್ತಾ, ಯಾವ ಕಾಮನೆಯೂ ಇಲ್ಲದೆ ತನ್ನನ್ನು ಆ ಪರಮಾತ್ಮನಿಗೆ ಒಪ್ಪಿಸಿಕೊಂಡು, ಅವನಿಚ್ಛೆಗನುಗುಣವಾಗಿ ನಡೆಯಬೇಕು.

*(ಮುಂದಿನ ಸಂಚಿಕೆಗೆ)*

## ಶ್ರೀಮಾತೆಯವರ ಉಪದೇಶಗಳು



✣ ಎಂತಹ ಮಹಾಪುರುಷನೇ ಆಗಿರಲಿ, ದೇಹಧಾರಣೆ ಮಾಡಿದನೆಂದರೆ ದೇಹದ ಕರ್ಮ ಸವೆಸಲೇಬೇಕು. ಆದರೆ ವ್ಯತ್ಯಾಸವೇನೆಂದರೆ, ಸಾಮಾನ್ಯ ಜನ ಅಳುತ್ತಾ ದೇಹ ಬಿಡುತ್ತಾರೆ. ಮಹಾವ್ಯಕ್ತಿಗಳಾದರೆ ನಗುತ್ತಾ ದೇಹ ಬಿಡುತ್ತಾರೆ. ಅವರಿಗೆ ಮೃತ್ಯುವೆಂದರೆ ಒಂದು ಆಟ!

✣ ದೇವರು ಮನುಷ್ಯನ ದೇಹದೊಳಗೆ ಇದ್ದಾನೆ. ಅವನನ್ನು ತಿಳಿಯದೆ ಮನುಷ್ಯರು ಎಲ್ಲೆಲ್ಲೋ ಅಲೆದಾಡುತ್ತಾ ಸಾಯುತ್ತಿದ್ದಾರೆ. ಭಗವಂತನೊಬ್ಬನೇ ಸತ್ಯ, ಉಳಿದೆಲ್ಲವೂ ಮಿಥ್ಯೆ.

✣ ಸಂಸಾರದಲ್ಲಿ ಯಾರಿಗೆ ದುಃಖವಿಲ್ಲ ಹೇಳು? ಕೃಷ್ಣನಿಗೆ ವೃಂದೆ ಹೇಳಿದಳು, ''ನಿನ್ನನ್ನು ದಯಾಮಯ ಅಂತ ಯಾರು ಹೇಳಿದರು? ರಾಮಾವತಾರದಲ್ಲಿ ಸೀತೆ ಅಳುವಂತೆ ಮಾಡಿದೆ. ಕೃಷ್ಣಾವತಾರಲ್ಲಿ ರಾಧೆ ಅಳುವಂತೆ ಮಾಡಿದೆ. ಕಂಸನ ಕಾರಾಗೃಹದಲ್ಲಿ ನಿನ್ನ ತಾಯಿ ತಂದೆಯರು ಹಗಲು ರಾತ್ರಿ 'ಕೃಷ್ಣ! ಕೃಷ್ಣ!' ಎನ್ನುತ್ತ ಎಷ್ಟೊಂದು ಕಷ್ಟ ಅನುಭವಿಸುತ್ತಿದ್ದಾರೆ! ಆದರೂ ನಾನು ನಿನ್ನ ನಾಮವನ್ನು ಏಕೆ ಉಚ್ಚರಿಸುತ್ತಿದ್ದೇನೆ ಅಂದರೆ, ನಿನ್ನ ನಾಮ ಮೃತ್ಯುಭಯವನ್ನು ನಿವಾರಿಸುತ್ತದೆ ಅಂತ.''

ಶ್ರೀಶಾರದಾದೇವಿ ವಚನವೇದದಿಂದ